**ದಿನಾಂಕಃ 05.12.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.**

## ಪಾಟೀಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ ಕೆ.ಆರ್.ಜಿ ಅವರಿಂದ–

1. ನಾನು ಬಿ.ಕಾಂ ವರೆಗೂ ವಿದ್ಯಾಭ್ಯಾಸ ಮಾಡಿದ್ದೇನೆ. ದಾವೆ ಹೂಡಲು ನಮ್ಮ ವಕೀಲರಿಗೆ ನಾನೇ ಮಾಹಿತಿ ನೀಡಿದ್ದೇನೆ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ. ನಿಪಿ.1 ಮತ್ತು 2 ಎರಡೂ ಕರಾರು ಪತ್ರಗಳ ವಿಚಾರಗಳನ್ನು ನಾನು ಓದಿ ತಿಳಿದುಕೊಂಡಿದ್ದೇನೆ. ಕರಾರು ಜಮೀನು ಬಿಳಿಕೆರೆ ಹೋಬಳಿ, ಮಲ್ಲಿನಾಥಪುರ ಗ್ರಾಮದಲ್ಲಿ ಇದೆ. ಜಮೀನಿನ ಕ್ರಯದ ಮಾತುಕತೆ ದಿಃ 25.11.2015 ರಂದು ನಮ್ಮ ಮನೆ ಇರುವ ಹೂಟಗಳ್ಳಿಯಲ್ಲಿ ಆಗಿತ್ತು. ಮಾತುಕತೆಯಲ್ಲಿ ಪ್ರತಿವಾದಿ 1 ಮತ್ತು ಕರೀಗೌಡ ರವರ ಬಂದಿದ್ದರು. 1 ನೇ ಪ್ರತಿವಾದಿಗೆ ಎಷ್ಟು ಜನ ಮಕ್ಕಳು ಎಂದು ತಿಳಿದುಕೊಂಡಿದ್ದಿರಾ ಎಂದರೆ ನಮಗೆ ಮೊದಲು 2 ಮಕ್ಕಳು ಎಂದು ಹೇಳಿದ್ದರು ನಂತರ ತಿಳಿದಂತೆ ಅವರಿಗೆ 3 ಮಕ್ಕಳು ಇದ್ದಾರೆ ಎಂದು ತಿಳಿದು ಬಂತು. ಈ ದಾವೆಯಲ್ಲಿ ಮಹದೇವ, ಅವರ ಹೆಂಡತಿ ವಿಜೆಯ, ಮಕ್ಕಳು ಪೂಜ, ಪುಣ್ಯ ಅನಂತರ ಕೃಷ್ಣ ಅವರ ಹೆಂಡತಿ ಗೌರಿ ಮತ್ತು ಮೈನರ್ ಮಕ್ಕಳಾದ ಲೊಕೇಶ್ , ಭೂಪತಿ ರವರನ್ನು ಸೇರ್ಪಡೆ ಮಾಡಿದ್ದೇನೆ.

2. ಸಣ್ಣೇಗೌಡರ ರವರ ಮಕ್ಕಳಾದ ಮಹದೇವ ಮತ್ತು ಕೃಷ್ಣ ಹಾಗೂ ಅವರ ಪತ್ನಿಯರಿಗೆ ದಾವಾ ಸ್ವತ್ತಿನ ವ್ಯವಹಾರದ ವಿಚಾರ ತಿಳಿದಿತ್ತು. ನಮ್ಮ ಮನೆಯಲ್ಲಿ ಮಾತುಕತೆ ಆಗುವಾಗ ಸಣ್ಣೇಗೌಡ ರವರ ಮಕ್ಕಳು ಬಂದಿರಲಿಲ್ಲ. ಮಾತುಕತೆ ಸಂದರ್ಭದಲ್ಲಿ ಸಣ್ಣೇಗೌಡ, ಸುರೇಶ್ ರವರು ಸಾಕ್ಷಿಯಾಗಿ ಇದ್ದರು ಹಾಗೆಯೆ ಸ್ವಾಮಿಗೌಡ ಕೂಡ ಇದ್ದರು ಎನ್ನುತ್ತಾರೆ. ಮೊದಲಿಗೆ ಮಾತುಕತೆ 1 ಎಕರೆ , 10 ½ ಗುಂಟೆಗೆ ರೂ. 16,41,250/– ಗಳಿಗೆ ಆಗಿತ್ತು. ನಾನು ಇದೆ ರೀತಿ ಮಲ್ಲಿನಾಥಪುರದ ಸುತ್ತಮುತ್ತಲ ಗ್ರಾಮದಲ್ಲಿ ಕೆಲವು

ಜಮೀನುಗಳನ್ನು ಖರೀದಿ ಮಾಡಿದ್ದೇನೆ ಎಂದರೆ ಸರಿಯಲ್ಲ, ಆದರೆ ನಮಗೆ ಸೇರಿದ 4 ಎಕರೆ ಜಮೀನು ಅಲ್ಲಿದೆ. 1 ನೇ ಪ್ರತಿವಾದಿ ಮನೆ ಮುಂದಿನಿಂದಲೆ ನಮ್ಮ ಸದರಿ 4 ಎಕರೆ ಜಮೀನಿಗೆ ಹೋಗಬೇಕು ಎನ್ನುತ್ತಾರೆ. ಸ್ವತ್ತಿನ ವ್ಯವಹಾರ ಆಗುವ ಮೊದಲು ನಾನು ಅವರ ಜಮೀನಿನ ಆರ್.ಟಿ.ಸಿ ನೋಡಿದ್ದೆ. ಸದರಿ ಆರ್.ಟಿ.ಸಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ.

3. 2015 ನೇ ಸಾಲಿನಲ್ಲಿ ಮಾತುಕತೆ ಆಗಿತ್ತು ಎಂದು ನಾನು ಹೇಳಿದ್ದು ಆ ಸಮಯದಲ್ಲಿ ಪ್ರತಿವಾದಿಗಳ ಹೆಸರಿಗೆ ಯಾವುದೇ ಜಮೀನು ಆಗಲಿ ಅಥವಾ ದಾಖಲೆಗಳಾಗಲಿ ಇರಲಿಲ್ಲ ಎಂದರೆ ಸರಿಯಲ್ಲ, ಇದೆ ನ್ಯಾಯಾಲಯದಲ್ಲಿ ಓ.ಎಸ್ ನಂ. 240/2006 ಪ್ರತಿವಾದಿಗಳಿಗೆ ಸಂಬಂಧಪಟ್ಟ ಜಮೀನಿನ ಬಗ್ಗೆ ದಾವೆ ಹೂಡಿದ್ದು , ಅದು 2012 ರಲ್ಲಿ ರಾಜಿಯಲ್ಲಿ ಮುಕ್ತಾಯಗೊಂಡಿದೆ ಎಂದು ನುಡಿಯುತ್ತಾರೆ. ಆದರೆ ಸದರಿ ದಾವೆಯ ದಾಖಲಾತಿಗಳನ್ನು ನಾನು ಹಾಜರು ಪಡಿಸಿಲ್ಲ. ನಿಪಿ. 1 ರ ಕರಾರು ಪತ್ರದಲ್ಲಿ ಪ್ರತಿವಾದಿ 1, 2,ಕೃಷ್ಣ, ಗೌರಿ ಮತ್ತು ಸಣ್ಣೇಗೌಡ ರವರ ಸಹಿ ಇದೆ, ಆದರೆ 2 ನೇ ವಾದಿ ಮಹದೇವ ರವರ ಸಹಿ ಇರುವುದಿಲ್ಲ. ಈ ಹಂತದಲ್ಲಿ ಸಾಕ್ಷಿ ನೋಡಿ ಹೇಳಿದ ಸಹಿಗಳನ್ನು ವಾದಿ ಪರ ವಕೀಲರು ಕೋರಿಕೊಂಡ ಮೇರೆಗೆ ನಿಪಿ. 1 ರ 1 ನೇ ಪುಟದಲ್ಲಿ ರುವ ಪ್ರತಿವಾದಿ 1, 2, 6 ಮತ್ತು 7 ರವರ ಸಹಿಗಳನ್ನು **ನಿಪಿ.1(ಎ ರಿಂದ ಡಿ)** ಕ್ರಮವಾಗಿ ಗುರುತಿಸಲಾಯಿತು. ಮತ್ತು 3 ನೇ ಪುಟದಲ್ಲಿರುವ ಸಹಿಗಳನ್ನು **ನಿಪಿ. 1(ಈ ಯಿಂದ ಹೆಚ್** ) ಎಂದು ಗುರುತಿಸಲಾಯಿತು. ಸಾಕ್ಷಿದಾರರಾಗಿ ಇದ್ದ ಸುರೇಶ್ ಮತ್ತು ಸ್ವಾಮಿಗೌಡ ರವರ ಸಹಿಗಳನ್ನು **ನಿಪಿ. 1(ಐ ಮತ್ತು ಜೆ.)** ಎಂದು ಗುರುತಿಸಲಾಯಿತು. ಆದರೆ ಸದರಿ ದಾಖ್ಲೆಗೆ 3 ನೇ ಪ್ರತಿವಾದಿ ಮಾತ್ರ ಸಹಿ ಮಾಡಿರುವುದಿಲ್ಲ. 3 ನೇ ಪ್ರತಿವಾದಿ ಯ ಸಹಿ ಪಡೆಯಲು ನಮಗೇನು ತೊಂದರೆ ಇರಲಿಲ್ಲ ಎಂದರೆ, ತೊಂದರೆ ಇರಲಿಲ್ಲ ಅವರು ವಿಶ್ವಾಸದಿಂದ ಇದ್ದರು ಎಂಬ ಕಾರಣಕ್ಕೆ ಪಡೆದಿಲ್ಲ. 2015 ರ ನವೆಂಬರ್ ತಿಂಗಳ 1 ಅಥವಾ 2 ನೇ ತಾರೀಖಿನಂದು ಮಾತುಕತೆ ಆಗಿತ್ತು ದಿಃ 25.01.2015 ರಂದು ನಿಪಿ. 1 ರ ಕರಾರು ಆಯಿತು.

4. ನಿಪಿ.1 ರ ಪತ್ರವನ್ನು ಪತ್ರಬಹರಗಾರರಾದ ನಾಗರಾಜು ರವರು ತಂದು ತಯಾರಿಸಿದ್ದರು. ಕ್ರಯದ ಬಾಬ್ತು ಹಣದ ಪೈಕಿ 2 ಲಕ್ಷ ರೂ.ಗಳನ್ನು ಜಯಲಕ್ಷ್ಮಿಪುರಂ ಶಾಖೆಯ ಐ.ಡಿ.ಬಿ.ಐ ಬ್ಯಾಂಕ್ 1 ಚೆಕ್ ಅನ್ನು 1 ನೇ ಪ್ರತಿವಾದಿಗೆ ಮುಂಗಡವಾಗಿ ನೀಡಿದ್ದರು. ನಿಪಿ. 2 ರ ಕರಾರು ಆಗುವ ಪ್ರತಿವಾದಿಗಳಿಗೆ 4 ಲಕ್ಷ ರೂ.ಗಳನ್ನು ಕೊಟ್ಟಿದ್ದೇವೆ. ಈ ರೀತಿ 4 ಲಕ್ಷ ರೂ.ಗಳನ್ನು ಕೊಟ್ಟಿದ್ದೇವೆ ಎಂಬುದಕ್ಕೆ ನ್ಯಾಯಾಲಯಕ್ಕೆ ದಾಖಲೆ ಹಾಜರು ಪಡಿಸಿಲ್ಲ. ನಿಪಿ. 1 ರ ಕರಾರು ಆದ 1 ವರ್ಷದ ಒಳಗೆ ಕ್ರಯದ ಪತ್ರ ಮಾಡಿಕೂಡುವಂತೆ ಮಾತುಕತೆ ಆಗಿತ್ತು. ನಿಪಿ. 2 ರ 2021 ರ ವ್ಯವಹಾಯ ಮೈಸೂರಿನಲ್ಲಿ ಆಯಿತು. ಆ ಸಮಯದಲ್ಲಿ ಸಾಕ್ಷಿದಾರರಾದ ಸುರೇಶ್, ಬ್ರಿಡ್ಜ್ ಮೋಹನ್, ಲಾಲ್ ಬಾಗ್ ಜಾ ಮತ್ತು ವಿಕ್ರಂ ಸಿಂಗ್ ಸೇರಿದ್ದರು. ನಿಪಿ. 2 ರ ಛಾಪಾ ಕಾಗದವನ್ನು ನಾವವೆ ತಂದಿದ್ದೇವು.

5. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದ ವಿಚಾರಗಳನ್ನು ತಿಳಿದುಕೊಂಡಿದ್ದೇನೆ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದ 3 ನೇ ಪುಟದ 2 ನೇ ಸಾಲಿನಲ್ಲಿ ದಿಃ 05.04.2021 ರಂದು 1 ನೊಂದಾಯಿತವಲ್ಲದ ಶುದ್ದ ಒಪ್ಪಂದ ಅಗ್ರಿಮೆಂಟ್ ಯಾ ಕರಾರು ಪತ್ರ ಎಂದು ಬರೆಸಿದ್ದೇನೆ ಎಂದರೆ ಸರಿ. ಈ ವಿಚಾರವನ್ನು ನನ್ನ ವಾದ ಪತ್ರದಲ್ಲಿಯೂ ಬರೆಸಿದ್ದೇನೆ. ಈ ಸಂಗತಿಯನ್ನು ನನ್ನ ವಾದ ಪತ್ರದಲ್ಲಿ ಬರೆಸಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ 2 ಮತ್ತು 6 ರವರು ನನಗೆ 2015 ರಿಂದ ಪರಿಚಯ ಇದ್ದಾರೆ. ಈ ರೀತಿ ಪರಿಚಯ ಇದ್ದ ಪ್ರತಿವಾದಿ 2 ಮತ್ತು 6 ರವರು ತಮಗೆ ಹಣದ ಅವಶ್ಯಕತೆ ಇದೆ ಎಂದು ನನ್ನಲ್ಲಿ ಹಣದ ಸಹಾಯ ಕೇಳಿದ್ದರು ಎಂದರೆ ಸರಿ. ಆ ಸಮಯದಲ್ಲಿ ನಾನು ಅವರಿಗೆ ಚೆಕ್ ಮೂಲಕ ರೂ. 2 ಲಕ್ಷ ಗಳನ್ನು ಕೊಟ್ಟಿದ್ದೆ ಎಂದರೆ ಸರಿ. ಈ ಜಮೀನಿನ ವ್ಯವಹಾರಕ್ಕೂ ಮತ್ತು ನಾನು ನೀಡಿದ 2 ಲಕ್ಷ ರೂ. ಗಳಿಗೂ ಯಾವುದೆ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಸದರಿ 2 ಲಕ್ಷ ರೂ. ಗಳನ್ನು ಪ್ರತಿವಾದಿ 2 ಮತ್ತು 6 ರವರ ಮನೆ ಖರ್ಚಿಗಾಗಿ ಮಾತ್ರ ಕೊಟ್ಟಿದ್ದೆ ಎಂದರೆ ಸರಿಯಲ್ಲ ಜಮೀನಿನ ವ್ಯವಹಾರಕ್ಕೆಂದೆ ಕೊಟ್ಟಿದ್ದೆ.

6. 2021 ರ ವ್ಯವಹಾರದ ಸಮಯದಲ್ಲಿ ನಾನು ಜಮೀನಿನ ಆರ್.ಟಿ.ಸಿ ನೋಡಿದ್ದೆ. 2021 ರ ವ್ಯವಹಾರದ ಸಮಯದಲ್ಲಿ ನಾನು ನೋಡಿದ್ದೆ ಎನ್ನಲಾದ ಆರ್.ಟಿ.ಸಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ.2013-14 ರಿಂದ 2020-21 ನೇ ಸಾಲಿನ ವರೆಗೂ ಸರ್ವೆ ನಂ. 51/1 ರ ಜಮೀನು ಕುಳ್ಳಮ್ಮ ಕೋಂ ಮಾಲೇಗೌಡ ರವರ ಹೆಸರಿನಲ್ಲಿ ಇತ್ತು ಎಂದರೆ ಸರಿ, ಅವರ ಅದನ್ನು ಸರಿಪಡಿಸಿಕೊಡುತ್ತೇನೆ ಎಂದು ಹೇಳಿದ್ದರು. ಈ ಹಂತದಲ್ಲಿ ಪ್ರತಿವಾದಿಗಳ ಪರ ವಕೀಲರ ಕೋರಿಕೆ ಮೇರೆಗೆ ಸರ್ವೆ ನಂ. 51/6 ರ 2013-14 ನೇ ಸಾಲಿನಿಂದ 2020-21 ನೇ ಸಾಲಿನ ವರೆಗಿನ ಆರ್.ಟಿ.ಸಿಗಳನ್ನು **ನಿಡಿ. 1** ರಿಂದ **ನಿಡಿ. 9** ಎಂದು ಗುರುತಿಸಲಾಯಿತು . ಪ್ರತಿವಾದಿ 1, 3 ಮತ್ತು 7 ರವರಿಗೆ ಈ ವ್ಯವಹಾರದ ಯಾವುದೆ ವಿಚಾರ ಗೊತ್ತಿಲ್ಲ ನಾನು ಪ್ರತಿವಾದಿಗಳೊಂದಿಗೆ ಸೇರಿ ಖಾಲಿ ಪತ್ರಕ್ಕೆ ಸಹಿ ಪಡೆದುಕೊಂಡಿದ್ದೆ ಎಂದರೆ ಸುಳ್ಳು ಎಲ್ಲರೂ ಕೂತು ಕಾಫಿ ಕುಡಿದು ಎಲ್ಲಾ ವಿಶ್ವಾಸ ದ್ರೋಹ ಮಾಡಿದ್ದಾರೆ. ಯಾವುದೆ ಅಗ್ರಿಮೆಂಟ್ ಆಗಿಲ್ಲ ನಾನು ಸುಳ್ಳು ದಾವೆ ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಜೈಬುನ್ನಿಸಾ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.